# ಪುಣ್ಯಕೋಟಿ

## ಅ. ಪದಗಳ ಅರ್ಥ ಬರೆಯಿರಿ. (Write meaning in kannada )

ವನ = ಕಾಡು,ಬನ    ಗವಿ = ಗುಹೆ,    ಸತ್ಯ = ನಿಜ,

ಹುಲಿ = ವಾಘ್ರ,    ಹಸು = ದನ

## ಆ. ವಿರುದ್ಧ ಪದಗಳನ್ನು ಬರೆಯಿರಿ. (Write the opposite words)

ಸತ್ಯ x ಸುಳ್ಳು    ಮೇಲೆx ಕೆಳಗೆ    ಹಿಂದೆ x ಮುಂದೆ

ಸುಂದರ x ಕುರೂಪ    ಸಂಜೆ x ಬೆಳಿಗ್ಗೆ

## ಇ. ವಚನ ಬದಲಿಸಿ ಬರೆಯಿರಿ. (Change to Singular/Plural)

ಕರು = ಕರುಗಳು    ಮರ = ಮರಗಳು

ತಂದೆ = ತಂದೆಯಂದಿರು    ಗೊಲ್ಲ = ಗೊಲ್ಲರು

ಅದು = ಅವು    ತಾಯಿ = ತಾಯಂದಿರು

## ಈ. ಪದಗಳನ್ನು ಬಿಡಿಸಿ ಬರೆಯಿರಿ. (Split the words)

ಬಾಗಿಲಲ್ಲಿ = ಬಾಗಿಲು + ಅಲ್ಲಿ

ಆಹಾರವನ್ನು = ಆಹಾರ + ಅನ್ನು

ಕೊಳಲನೂದಿ = ಕೊಳಲನು +ಊದಿ

ದೊಡ್ಡಿಯೊಳಗೆ = ದೊಡ್ಡಿ + ಒಳಗೆ

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

ಉ. ಹೊಂದಿಸಿ ಬರೆಯಿರಿ. (Match the following)

| | | |
|---|---|---|
| ೧. ಕೊಳಲು | ಅ. ಹಸು | ಗೊಲ್ಲ |
| ೨. ಪುಣ್ಯಕೋಟಿ | ಆ. ಗೊಲ್ಲ | ಹಸು |
| ೩. ಕರ್ನಾಟಕ | ಇ. ಹುಲಿ | ನಾಡು |
| ೪. ಅರ್ಬುತ | ಈ. ನಾಡು | ಹುಲಿ |

ಊ. ಒಂದು ವಾಕ್ಯದಲ್ಲಿ ಉತ್ತರಿಸಿರಿ. (Answer in one sentence)

೧. ಬೆಟ್ಟ ಪ್ರದೇಶದಲ್ಲಿ ಯಾರು ವಾಸವಾಗಿದ್ದರು?

ಉ: ಬೆಟ್ಟ ಪ್ರದೇಶದಲ್ಲಿ ಅರ್ಬುತನೆಂಬ ಹುಲಿ ವಾಸವಾಗಿತ್ತು.

೨. ಗೊಲ್ಲನು ಹಸುಗಳನ್ನು ಎಲ್ಲಿ ಕಟ್ಟುತ್ತಿದ್ದನು?

ಉ: ಗೊಲ್ಲನು ಹಸುಗಳನ್ನು ದೊಡ್ಡಿಯೊಳಗೆ ಕಟ್ಟುತ್ತಿದ್ದನು.

೩. ದನಗಳನ್ನು ಯಾರು ಕಾಯುತ್ತಿದ್ದರು?

ಉ: ದನಗಳನ್ನು ಕಾಳಿಂಗನೆಂಬ ಗೊಲ್ಲ ಕಾಯುತ್ತಿದ್ದರು.

೪. ಹುಲಿ ಹೇಗೆ ಪ್ರಾಣ ಬಿಟ್ಟಿತು?

ಉ: ಹುಲಿ ಬೆಟ್ಟದಿಂದ ಹಾರಿ ಪ್ರಾಣ ಬಿಟ್ಟಿತು.

ಋ. ಎರಡು ವಾಕ್ಯಗಳಲ್ಲಿ ಉತ್ತರಿಸಿರಿ. (Answer in two sentences)

೧. ಹಸುವಿನ ನಿಷ್ಠೆಯನ್ನು ಕಂಡು ಹುಲಿ ಏನೆಂದು ನುಡಿಯಿತು?

ಉ: ಹಸುವಿನ ನಿಷ್ಠೆಯನ್ನು ಕಂಡು ಹುಲಿ ನನ್ನ ಒಡಹುಟ್ಟಕ್ಕ ನೀನು.

ನಿನ್ನನ್ನು ಕೊಂದರೆ ಪರಮಾತ್ಮನು ಮೆಚ್ಚುವುದಿಲ್ಲ ಎಂದು ನುಡಿಯಿತು,

FORKANNADA ಕನ್ನಡಕ್ಕಾಗಿ ಇಲ್ಲಿ ಬನ್ನಿ

೨. ಪುಣ್ಯಕೋಟಿ ಇತರ ಹಸುಗಳಲ್ಲಿ ಏನೆಂದು ಮೊರೆಯಿಟ್ಟಿತು?

ಉ:ಹಸುಗಳಲ್ಲಿ ಮುಂದೆ ಬಂದರೆ ಹಾಯಬೇಡಿ, ಹಿಂದೆ ಬಂದರೆ ಒದೆಯಬೇಡಿ, ನನ್ನ ಕಂದನನ್ನು ನಿಮ್ಮವನೆಂದು ಕಾಣಿರಿ ಎಂದು ಪುಣ್ಯಕೋಟಿ ಮೊರೆಯಿಟ್ಟಿತು.

ಎ. ಯಾರು ಯಾರಿಗೆ ಹೇಳಿದರು? (Who told to whom)

೧. "ನಿನ್ನ ಕೊಂದು ನಾನೇನು ಪಡೆಯುವೆ'

ಉ: ಅರ್ಬುತ ಹುಲಿಯು, ಪುಣ್ಯಕೋಟಿಗೆ ಹೇಳಿತು.

೨. ' ಅಮ್ಮ ತಬ್ಬಲಿ ಮಾಡಲೇಕೆ '

ಉ: ಪುಣ್ಯಕೋಟಿಯ ಕರು ಪುಣ್ಯಕೋಟಿಗೆ ಹೇಳಿತು.

೩. ' ಸತ್ಯವೇ ನಮ್ಮ ತಾಯಿ ತಂದೆ '

ಉ: ಪುಣ್ಯಕೋಟಿಯು ಕರುವಿಗೆ ಹೇಳಿತು.

೪. ' ಕಂದ ನಿಮ್ಮವನೆಂದು ಕಾಣಿರಿ '

ಉ: ಪುಣ್ಯಕೋಟಿಯು ತನ್ನ ಬಳಗಕ್ಕೆ ಹೇಳಿತು.

FOR KANNADA ಕನ್ನಡಕ್ಕಾಗಿ ಇಲ್ಲಿ ಬನ್ನಿ